## GOVT.FIRST GRADE COLLEGE, TAVARAGERA

## CODE OF CONDUCT OF STUDENTS.

1) ಕಾಲೇಜಿನ ಕೆಲಸದ ಅವಧಿ 9:30 ರಿಂದ ಸಾಯಂಕಾಲ 4:30 ಗಂಟೆ

2) ಪ್ರತಿಯೊಬ್ಬ ವಿದ್ಯಾರ್ಥಿ ಶೇಕಡ 75ರಷ್ಟು ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಲೇಬೇಕು. ಹಾಜರಾತಿ ಕೊರತೆಯಾದರೆ ಪರೀಕ್ಷೆ ಬರೆಯಲು ಅವಕಾಶವಿಲ್ಲ.

3) ಪ್ರತಿಯೊಬ್ಬ ವಿದ್ಯಾರ್ಥಿ 9:20ಕೆ ಜರುಗುವ ಪ್ರಾರ್ಥನೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.

4) ನಮ್ಮ ಕಾಲೇಜಿನ ಅವಧಿಯಲ್ಲಿ ಯಾವುದೇ ಮಿಲಿಟರಿ ,ಸರಕಾರಿ ಅಥವಾ ಖಾಸಗಿಯಾದ ಪೂರ್ಣಕಾಲಿಕ ಉದ್ಯೋಗದಲ್ಲಿ ತೊಡಗಿಸಿಕೊಳ್ಳತಕ್ಕದ್ದಲ್ಲ. ಈ ರೀತಿ ಇರುವುದು ತಿಳಿದುಬಂದರೆ ಪ್ರವೇಶ ರದ್ದು ಪಡಿಸಲಾಗುವುದು.

5) ನಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಬೇರೊಂದು ಸಂಸ್ಥೆಯಲ್ಲಿ ಬೇರೊಂದು ಕೋರ್ಸಿಗೆ ಪ್ರವೇಶವನ್ನು ಪಡೆದು ಏಕಕಾಲಕ್ಕೆ ಅಧ್ಯಯನ ಮಾಡಲು ಅವಕಾಶವಿಲ್ಲ ಕಂಡುಬಂದರೆ ಸದರಿ ವಿದ್ಯಾರ್ಥಿಯ ಪ್ರವೇಶವನ್ನು ರದ್ದುಪಡಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

6} ಕಾಲೇಜಿನ ಎಲ್ಲ ಆಂತರಿಕ ಕಿರು ಪರೀಕ್ಷೆ ,ಸೆಮಿನಾರು, ಟುಟೋರಿಯಲ್ ಇತ್ಯಾದಿಗಳಿಗೆ ಕಡ್ಡಾಯವಾಗಿ ಹಾಜರಿರತಕ್ಕದ್ದು.

.7) ಪ್ರತಿದಿನ ಗುರುತಿನ ಪತ್ರ ಹಾಗೂ ಚೆಸ್ಟ್ ಕಾರ್ಡ್ಗಳನ್ನು ಕಡ್ಡಾಯವಾಗಿ ಧರಿಸತಕ್ಕದ್ದು ಹಾಗೂ ಪ್ರತಿನಿತ್ಯ ಸೂಚನಾ ಫಲಕವನ್ನು ತಪ್ಪದೆ ಓದಿಕೊಳ್ಳತಕ್ಕದ್ದು.

8) ಸಾಂಸ್ಕೃತಿಕ ಚಟುವಟಿಕೆ ,ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೆಡ್ಕ್ರಾಸ್ ,ರೇಂಜರ್ಸ್ &ರೋವರ್ಸ, ರಾಷ್ಟ್ರೀಯ ಹಬ್ಬಗಳು ಹಾಗೂ ಇತರ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ಭಾಗವಹಿಸತಕ್ಕದ್ದು.

9) ಕಾಲೇಜಿನಲ್ಲಿ ಬೋಧಕ ಹಾಗೂ ಬೋಧಕೇತರ ರೊಂದಿಗೆ ಸೌಜನ್ಯಯುತವಾಗಿ ವ್ಯವಹರಿಸುವುದು ಹಾಗೂ ವಿದ್ಯಾರ್ಥಿನಿಯರ ಘನತೆಗೆ ಚ್ಯುತಿ ಬಾರದಂತೆ ಸೌಹಾರ್ದಯುತವಾಗಿ ವರ್ತಸಕ್ಕದ್ದು.

10) ಕಾಲೇಜಿನ ಬಾಗಿಲು, ಕಿಡಕಿ, ಪೀಠೋಪಕರಣ, ಬ್ಲಾಕ್ಬೋರ್ಡ್, ಫ್ಯಾನ್ಸ್ ,ಸ್ವಿಚಸ್ , ಕ್ರೀಡಾ ಸಾಮಗ್ರಿ, ಗ್ರಂಥಾಲಯ ಪುಸ್ತಕಗಳು ಇವುಗಳನ್ನು ಸ್ವಂತ ಆಸ್ತಿ ಎಂದು ಭಾವಿಸಿ ಬಳಸತಕ್ಕದ್ದು. ಉದ್ದೇಶಪೂರ್ವಕವಾಗಿ ಹಾಳು ಮಾಡಿದರೆ ಸೂಕ್ತ ದಂಡ ವಿಧಿಸಲಾಗುತ್ತದೆ.

11) ಯಾವುದೇ ಹಿಂಸಾತ್ಮಕ ಹರತಾಳ ,ಸಂಪುಗಳಲ್ಲಿ ಭಾಗವಹಿಸಿ ಕೆಎಸ್ಆರ್ಟಿಸಿ ,ಅಥವಾ ಯಾವುದೇ ಸರಕಾರಿ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟುಮಾಡುವಂತಿಲ್ಲ.

12) ಬಸ್ ಪಾಸನ್ನು ನ್ಯಾಯೋಚಿತವಾಗಿ ಬಳಸಿ, ಸಹಪ್ರಯಾಣಿಕರಿಗೆ ,ಹಿರಿಯರಿಗೆ, ಮಹಿಳೆಯರಿಗೆ ,ರೋಗಿಗಳಿಗೆ, ಚಿಕ್ಕಮಕ್ಕಳಿಗೆ ,ಆಸನಗಳನ್ನು ಬಿಟ್ಟುಕೊಟ್ಟು ಸಿಬ್ಬಂದಿಗಳೊಂದಿಗೆ ಸೌಹಾರ್ದಯುತವಾಗಿ ವರ್ತಿಸಲು ಕೋರಲಾಗಿದೆ.

13) ಕಾಲೇಜಿನ ಆವರಣದಲ್ಲಿ ಮಧ್ಯಪಾನ, ಧೂಮಪಾನ, ಹಾಗೂ ತಂಬಾಕು ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇವುಗಳ ಬಳಕೆ ಕಂಡುಬಂದರೆ ಪ್ರವೇಶವನ್ನು ರದ್ದು ಮಾಡಲಾಗುತ್ತದೆ.

14) ಗ್ರಂಥಾಲಯ ಪುಸ್ತಕ ಹಾಗೂ ಕಾಲೇಜಿನ ಕ್ರೀಡಾ ಸಾಮಗ್ರಿಗಳನ್ನು ಸ್ವಂತ ಆಸ್ತಿಯಂತೆ ಭಾವಿಸಿ ಬಳಸತಕ್ಕದ್ದು. ಉದ್ದೇಶಪೂರ್ವಕವಾಗಿ ಕಳೆದರೆ ಅಥವಾ ಹಾಳು ಮಾಡಿದರೆ ಪುಸ್ತಕದ ಅಥವಾ ವಸ್ತುವಿನ ಬೆಲೆ ಎರಡರಷ್ಟು ದಂಡ ವಿಧಿಸಲಾಗುವುದು.

15) ಎಲ್ಲಾ ಶಿಷ್ಯವೇತನ ಅರ್ಜಿಗಳನ್ನು ವಿದ್ಯಾರ್ಥಿಗಳು ಕಾಲೇಜಿನಲ್ಲಿ ತಾವೇ ವಿಚಾರಿಸಿ, ತುಂಬಿ, ಪ್ರಾಂಶುಪಾಲರ ರುಜು ಪಡೆದು ಶಿಷ್ಯವೇತನ ಗಳನ್ನು ಮಂಜೂರು ಮಾಡಿಸಿಕೊಳ್ಳುತ್ತ ಕದ್ದು. ಶಿಷ್ಯ ವೇತನ ಮಂಜೂರಾಗದಿದ್ದರೆ ,ಸಂಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ತುಂಬಬೇಕಾಗುತ್ತದೆ.

16)" ಸ್ವಚ್ಚತೆಯೇ ದೈವತ್ವ "ಎಂಬ ನಾಣ್ನುಡಿಯಂತೆ ಕಾಲೇಜಿನ ತರಗತಿ ಕೋಣೆಗಳನ್ನು ಹಾಗೂ ಕಾಲೇಜಿನ ಆವರಣವನ್ನು ಸ್ವಚ್ಛವಾಗಿಡಲು ಸಂಪೂರ್ಣವಾಗಿ ಸಿಬ್ಬಂದಿಗಳೊಂದಿಗೆ ಸಹಕರಿಸಲು ವಿನಂತಿಸಲಾಗಿದೆ.